ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 73/2024**

ಪ್ರ.ವ.ಬೋ.ತಾಃ 19-11-2025

ಚಾಸಾಃ 2 ಫ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಜಯರಾಮ್ |
| ತಂದೆ/ಗಂಡನ ಹೆಸರು | ಸಣ್ಣಪ್ಪ |
| ವಯಸ್ಸು | 60 ವರ್ಷ |
| ವೃತ್ತಿ | ಪೆಟ್ರೋಲ್ ಬಂಕ್‌ನಲ್ಲಿ ಕೆಲಸ |
| ವಾಸ | ಮಿಡಿಗೇಶಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಚಾಸಾ.1ರವರು ಗೊತ್ತು. ಮೃತ ನಿಂಗಪ್ಪ ಮತ್ತು ಸಿದ್ದರಾಜುರವರು ಗೊತ್ತು. ದಿಃ10.07.2024 ರಂದು ಬೆಳಗ್ಗ 6.30 ಗಂಟೆ ಸಮಯದಲ್ಲಿ ಮೃತ ನಿಂಗಪ್ಪ ಮತ್ತು ಸಿದ್ದರಾಜುರವರು ಕಾಫಿ ಕುಡಿಯುವ ಉದ್ದೇಶದಿಂದ ನಮ್ಮ ಪೆಟ್ರೋಲ್ ಬಂಕ್ ಮುಂಭಾಗದಲ್ಲಿರುವ ರಸ್ತೆಯ ಪಕ್ಕದಲ್ಲಿರುವ ಫುಟ್ ಪಾತ್ ನಲ್ಲಿ ನಡೆದುಕೊಂಡು ಬರುತ್ತಿದ್ದರು. ಆಗ ಒಂದು ಕಂಟೈನರ್ ಅತೀ ವೇಗವಾಗಿ ಬಂದು ನಿಂಗಪ್ಪ ಮತ್ತು ಸಿದ್ದರಾಜುರವರಿಗೆ ಡಿಕ್ಕಿಪಡಿಸಿದ್ದು, ಇದರಿಂದ ದೊಡ್ಡ ಶಬ್ದ ಬಂತು. ತಕ್ಷಣ ಹೋಗಿ ನೋಡಲಾಗಿ ನಿಂಗಪ್ಪರವರು ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಸಿದ್ದರಾಜುರವರಿಗೆ ತಲೆಗೆ ಬಲಭಾಗಕ್ಕೆ ಮತ್ತು ಬಲ ಭುಜಕ್ಕೆ ತೀವ್ರ ಸ್ವರೂಪದ ಗಾಯಗಳಾಗಿ ಬಿದ್ದಿದ್ದರು. ಆನಂತರ

ಅವರನ್ನು ಮಧುಗಿರಿ ಆಸ್ಪತ್ರೆಗೆ ಆಂಬುಲೆನ್ಸ್ ಮೂಲಕ ತೆಗೆದುಕೊಂಡು ಹೋದರು. ಆನಂತರ ಆತನನ್ನು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರು ಎಂಬ ವಿಚಾರ ಗೊತ್ತಾಯಿತು. ಆನಂತರ ಸುಮಾರು 15 ದಿನಗಳ ಬಳಿಕ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದರು. ಆ ಸಮಯದಲ್ಲಿ ಆರೋಪಿ ಮತ್ತು ಅಪಘಾತಪಡಿಸಿದ ಕಂಟೈನರ್ ವಾಹನವನ್ನು ನನಗೆ ತೋರಿಸಿದರು. ಆ ಕಂಟೈನರ್ ವಾಹನಕ್ಕೆ ಸಂಬಂಧಪಟ್ಟ ನಾಲ್ಕು ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ.6 ರಿಂದ 9 ಎಂದು ಈಗಾಗಲೇ ಗುರುತಿಸಲಾಗಿದೆ. ಆನಂತರ ಆರೋಪಿ ಚಾಸಾ.1 ರವರಿಗೆ ಸೇರಿದ ಇಂಡಿಕಾ ಕಾರಿಗೂ ಸಹ ಅಪಘಾತಪಡಿಸಿದರು. ಆ ಇಂಡಿಕಾ ಕಾರಿಗೆ ಸಂಬಂಧಪಟ್ಟ ನಾಲ್ಕು ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ.10 ರಿಂದ 13 ಎಂದು ಈಗಾಗಲೇ ಗುರುತಿಸಲಾಗಿದೆ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ಎನ್.ಆರ್. ವಕೀಲರ ಪರವಾಗಿ ಶ್ರೀ ಆರ್.ಆರ್. ವಕೀಲರಿಂದಃ–**

ಆ ಸಮಯದಲ್ಲಿ ನಾನು ರಸ್ತೆಯಿಂದ ಸುಮಾರು 30 ಮೀಟರ್ ದೂರದಲ್ಲಿದ್ದೆನು. ಆ ಪೆಟ್ರೋಲ್ ಬಂಕ್ ನಲ್ಲಿ ನಾನು ವಾಹನಗಳಿಗೆ ಪೆಟ್ರೋಲ್ ಹಾಕುವ ಕೆಲಸ ಮಾಡುತ್ತೇನೆ. ಆ ಸಮಯದಲ್ಲಿ ನಾನು ಪೆಟ್ರೋಲ್ ಬಂಕ್ ನ ಹತ್ತಿರ ಪೆಟ್ರೋಲ್ ಹಾಕುತ್ತಿದ್ದೆನು. ಸಾಮಾನ್ಯವಾಗಿ ಆ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಆ ಸಮಯದಲ್ಲಿ ಯಾವ ಯಾವ ವಾಹನಗಳಲ್ಲಿ ಯಾರು ಚಾಲಕರು

ವಾಹನಗಳನ್ನು ಚಾಲಾಯಿಸುತ್ತಿದ್ದರು ಎಂದು ನೋಡಲಾಗುವುದಿಲ್ಲ. ಆ ದಿನ ಆ ಕಂಟೈನರ್ ಚಾಲಕನನ್ನು ನಾನು ನೋಡಿರುತ್ತೇನೆ. ಆದರೆ ಆತ ಆ ಸ್ಥಳದಿಂದ ಓಡಿಹೋದನು. ಆ ದಿನ ಆ ಕಂಟೈನರ್ ವಾಹನ ಎಷ್ಟು ವೇಗವಾಗಿ ಬರುತ್ತಿತ್ತು ಎಂದು ಹೇಳಲಾಗುವುದಿಲ್ಲ. ಆ ದಿನ ಬೆಳಗ್ಗೆ 6.30 ಗಂಟೆಗೆ ಕತ್ತಲಾಗಿದ್ದ ಕಾರಣ ಯಾರು ವಾಹನವನ್ನು ಚಾಲಾಯಿಸುತ್ತಿದ್ದರು ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಬೇರೆ ಬೇರೆ ವಾಹನಗಳನ್ನು ಯಾವ ಚಾಲಕರು ಚಲಾಯಿಸುತ್ತಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ಆ ದಿನ ಆರೋಪಿ ಆ ಕಂಟೈನರ್ ವಾಹನವನ್ನು ಓಡಿಸುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅದೇ ದಿನ ಮತ್ತು ಅಪಘಾತವಾದ 15 ದಿನಗಳ ನಂತರವೂ ಸಹ ಹೇಳಿಕೆಯನ್ನು ನೀಡಿರುತ್ತೇನೆ. ಆ 15 ದಿನಗಳ ನಂತರ ಯಾವ ದಿನಾಂಕದಲ್ಲಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂಬುದನ್ನು ಈಗ ಹೇಳಲಾಗುವುದಿಲ್ಲ. ನಾನು ಚಾಸಾ.1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u>ಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ